**ಮೂ.ದಾ.ನಂ. 38/2018**

ಡಿ.ಡಬ್ಲ್ಯು.1

(ಇಂದು ದಿನಾಂಕ: **18-03-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರ ಶ್ರೀ.ಪಿ.ಜಿ.ಎಚ್. ವಕೀಲರಿಂದಃ**

ವಾದಿಯು ದೇವರಹಕ್ಕಲದ ನಿವಾಸಿ ಎಂದರೆ ಸರಿ. ನಾನು ಕೂಡ ದೇವರಹಕ್ಕಲದ ನಿವಾಸಿ ಎಂದರೆ ಸರಿ. ವಾದಿಯು ನಿವೃತ್ತ KSRTC ನೌಕರ ಎಂದರೆ ಸರಿ. ಸರ್ವೆ ನಂ. 90 ಹಿಸ್ಸಾ 10 ವಾದಿಯ ಮಾಲ್ಕೀ ಹಕ್ಕಿನ ಸ್ಥಳ ಎಂದರೆ ಸಾಕ್ಷಿಯು ಸರ್ವೆ ನಂಬರ ವಾದಿಯ ಹಕ್ಕಿನ ಸ್ಥಳದ್ದಾಗಿದ್ದು, ಹಿಸ್ಸಾದ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ 90 ಕುಮಟಾದ ಸ್ಟೇಟ್ ಬ್ಯಾಂಕ್ ನಿಂದ ಎಪಿಎಮ್‌ಸಿ ಗೆ ಹೋಗುವ ರಸ್ತೆಗೆ ಲಗತ್ತಾಗಿದೆ ಎಂದರೆ ಸರಿ. ಸರ್ವೆ ನಂಬರ 90 ಹಿಸ್ಸಾ 10 ರಲ್ಲಿ ವಾದಿಯು ಹೊಸ ಮನೆಯನ್ನು ಇತ್ತೀಚೆಗೆ ಕಟ್ಟಿರುತ್ತಾನೆ ಎಂದರೆ ಸರಿ. ಸರ್ವೆ ನಂಬರ 90 ಹಿಸ್ಸಾ 10 ಕುಮಟಾದ ಸ್ಟೇಟ್ ಬ್ಯಾಂಕನಿಂದ ಎಪಿಎಮಸಿ ಗೆ ಹೋಗುವ ರಸ್ತೆಯ ಬಲಭಾಗದಲ್ಲಿ ಇದೆ ಎಂದರೆ ಸಾಕ್ಷಿಯು ಸರ್ವೆ ನಂಬರ 90 ಮಾತ್ರ ಇದೆ ಎಂದು ನುಡಿಯುತ್ತಾರೆ. ಕುಮಟಾದ ಸ್ಟೇಟ್ ಬ್ಯಾಂಕ್‌ನಿಂದ ಎಪಿಎಮ್‌ಸಿ ಗೆ ಹೋಗುವ ರಸ್ತೆಯ ಎಡಭಾಗದಲ್ಲಿರುವ ರಸ್ತೆಯು ಗುಡ್ಡವಾಗಿದೆ ಎಂದರೆ ಸರಿ. ಕುಮಟಾ ಸ್ಟೇಟ ಬ್ಯಾಂಕನಿಂದ ಎಪಿಎಮ್‌ಸಿ ಗೆ ಹೋಗುವ ರಸ್ತೆಯ ಬಲಭಾಗದಲ್ಲಿರುವ ಎಲ್ಲ ಮನೆಗಳು ತಗ್ಗು ಪ್ರದೇಶದಲ್ಲಿ ಇದೆ. ವಾದಿಯ ಮನೆಯ ಸ್ಲಾಪ್ ಹಾಗೂ ಕುಮಟಾ ಎಪಿಎಮ್‌ಸಿ ರಸ್ತೆ ಸರಿಯಾಗಿದೆ ಎಂದರೆ ಸರಿ.

ಡಿ.ಡಬ್ಲ್ಯು.1

ಸರ್ವೆ ನಂಬರ 90 ಹಿಸ್ಸಾ 10 ರ ವಾದಿಯ ಮನೆ ಇದೆ ಎಂದರೆ ಸಾಕ್ಷಿಯು ನನಗೆ ಗೊರತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ 90 ಹಿಸ್ಸಾ 10 ಪಶ್ಚಿಮ ದಿಕ್ಕಿನಲ್ಲಿ ಸರ್ವೆ ನಂಬರ 90 ಹಿಸ್ಸಾ 9 ಇದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ಯ ಮನೆಯ ಮೇಲುಗಡೆ ಇರುವ ರಸ್ತೆಯ ಎಡಬದಿಯ ದಿಕ್ಕು ಪೂರ್ವ ಎಂದರೆ ಸರಿ. ವಾದಿಯ ಮನೆಯ ಕೆಳಗಡೆ ಇರುವ ತಗ್ಗಿನ ಪ್ರದೇಶ ಪಶ್ಚಿಮ ಎಂದರೆ ಸರಿ. ವಾದಿಯ ಮನೆಯ ಪಶ್ಚಿಮ ದಿಕ್ಕಿನ ಸ್ಥಳವು ಮಾಲತಿ ನಾರಾಯಣ ನಾಯ್ಕ ಇವರ ಸ್ಥಳ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯ ಜಾಗಕ್ಕೆ ಹೊಂದಿಕೊಂಡು ಮಾಲತಿ ನಾರಾಯಾಣ ನಾಯ್ಕ ಇವರ ಜಾಗ ಇದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ವಾದಿಯ ಕಂಪೌಂಡನ ಲಗ್ತವಾಗಿ ಗೋವಿಂದಪ್ಪ ನಾರಾಯಣ ನಾಯ್ಕ ಇವರ ಮನೆಯು ಇರುತ್ತವೆ ಎಂದರೆ ಸರಿ. ಸದ್ರಿಯವರ ಮನೆಯ ಹಿಸ್ಸಾ ನಂಬರ ಸರ್ವೆ ನಂಬರ 90 ಹಿಸ್ಸಾ 8 ಎಂದರೆ ನನಗೆ ಗೊತ್ತಿಲ್ಲ. ಗೋವಿಂದಪ್ಪ ನಾರಾಯಣ ನಾಯ್ಕ ಇವರ ಮನೆಯ ಪಶ್ಚಿಮ ದಿಕ್ಕಿನಲ್ಲಿ ವಿದ್ಯಾ ಕೋಂ ರಾಮಾ ನಾಯ್ಕ ಹಾಗೂ ಶಶಾಂಕ ನಾಯ್ಕ ಇವರ ಮನೆ ಇದೆ ಎಂದರೆ ಸರಿ ಆದರೆ ಸದ್ರಿಯವರ ಮನೆಯ ಸರ್ವೆ ನಂಬರ ಹಿಸ್ಸಾ ನನಗೆ ತಿಳಿದಿಲ್ಲ. ಮಾಲತಿ ನಾರಾಯಣ ನಾಯ್ಕ, ಗೋವಿಂದಪ್ಪ ನಾರಾಯಣ ನಾಯ್ಕ, ವಿದ್ಯಾ ಕೋಂ ರಾಮಾ ನಾಯ್ಕ ಹಾಗೂ ಶಶಾಂಕ ರಾಮಾ ನಾಯ್ಕ ಇವರ ಮನೆಯು ವಾದಿಯ ಮನೆ ಇರುವ ಸ್ಥಳಕ್ಕಿಂತ 10 ಫೂಟು ತಗ್ಗು ಪ್ರದೇಶದಲ್ಲಿ ಇದೆ ಎಂದರೆ ಸಾಕ್ಷಿಯು ಫೂಟು ಲೆಕ್ಕ ನನಗೆ ಗೊತ್ತಿಲ್ಲ. ಅಲ್ಲಿಯೇ ಇಳಿಜಾರಿನಲ್ಲಿ ಇದೆ ಎಂದು ನುಡಿಯುತ್ತಾರೆ.

**ಮೂ.ದಾ.ನಂ. 38/2018**

ಡಿ.ಡಬ್ಲ್ಯು.1

ನಮ್ಮ ಮನೆ ಇರುವ ಸ್ಥಳವು ಸರ್ವೆ ನಂಬರ 90 ಹಿಸ್ಸಾ 10 ರ ಲಗತ್ತಾಗಿ ದಕೆಣ ದಿಕ್ಕಿನಲ್ಲಿ ಇದೆ ಎಂದರೆ ಸಾಕ್ಷಿಯು ಪಶ್ಚಿಮ ದಿಕ್ಕಿನಲ್ಲಿ ಇದೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ